ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

HAMPI TIMES
No. 1 Leading Local News Paper
85,000 E-PAPER READERS
94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201

ಸಂಪುಟ:02 • ಸಂಚಿಕೆ: 73 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 13.09.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 73 • PRGI No:KARKAN/2023/88055 • VIJAYANAGARA • 13.09.2024 • Friday • Page:04 • Rs:2

ನಿರೀಕ್ಷಿಸಿ
ಆಂಗ್ಲ ಮಾಧ್ಯಮದ SSLC ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ
ಆಯ್ದ ವಿಷಯಗಳ ಸರಳ ಅಭ್ಯಾಸಕ್ಕಾಗಿ ಸುಲಭ ಮಾರ್ಗೋಪಾಯಗಳು
ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ ಶೀಘ್ರದಲ್ಲೇ....!
ವಿದ್ಯಾರ್ಥಿಗೊಂದು ದಿನಪತ್ರಿಕೆ - ಸುಂದರ ಬದುಕಿಗೆ ದಾರಿ
ದಿನಪತ್ರಿಕೆ ಓದುವುದರಿಂದ ...
• ಭಾಷಾ ಕೌಶಲ್ಯ
• ವ್ಯಕ್ತಿತ್ವ ವಿಕಾಸ
• ಚಿಂತನೆಗಳ ವಿಕಾಸ
• ಸಾಮಾನ್ಯ ಜ್ಞಾನ
• ಸಮಾಜದ ಬಗ್ಗೆ ಅರಿವು
ಹಂಪಿ ಟೈಮ್ಸ್ ಇ-ಪೇಪರ್
94486 33038 | www.hampitimes.com / epaper.hampitimes.com | Vijayanagara | hampitimes@gmail.com

ಮೈಕ್ರೋ ನ್ಯೂಸ್

ಬೃಹತ್ ಮಾನವ ಸರಪಳಿ ಕಾರ್ಯಕ್ರಮಕ್ಕೆ ಪ್ರತಿಯೊಬ್ಬರು ಕೈ ಜೋಡಿಸಿ: ಕೆ.ರಾಘವೇಂದ್ರ ಹಿಟ್ನಾಳ ಮನವಿ

ಹಂಪಿ ಟೈಮ್ಸ್ ಕೊಪ್ಪಳ

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಸೆಪ್ಟೆಂಬರ್ 15ರಂದು ಕೊಪ್ಪಳ ಜಿಲ್ಲೆಯ ರಾಜ್ಯ ಹೆದ್ದಾರಿ ಬೆಳಗಟ್ಟಿ ಗ್ರಾಮದಿಂದ ಮುನಿರಾಬಾದ್ ಡ್ಯಾಂ ವರೆಗೆ ಬೃಹತ್ ಮಾನವ ಸರಪಳಿಯನ್ನು ಆಯೋಜನೆ ಮಾಡಲಾಗಿದೆ. ಜಿಲ್ಲೆಯ ಎಲ್ಲಾ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಮಹಿಳೆಯರು, ನಾಗರಿಕರು, ವಿದ್ಯಾರ್ಥಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಕಾರ್ಯಕ್ರಮದ ಯಶಸ್ಸಿಗೆ ಕೈ ಜೋಡಿಸಬೇಕೆಂದು ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಮನವಿ ಮಾಡಿದ್ದಾರೆ.

ಗಂಗಮ್ಮ ನಿಧನ

ಹೂವಿನ ಹಡಗಲಿ: ತಾಲೂಕಿನ ಹೊಳಗುಂದಿ ಗ್ರಾಮದ ಗಂಗಮ್ಮ (42) ಗುರುವಾರ ಸಂಜೆ ಹೃದಯಾಘಾತದಿಂದ ನಿಧನರಾದರು.

ಮೃತರಿಗೆ ಪತಿ, ಪುತ್ರ ಇದ್ದಾರೆ. ಗ್ರಾಮದ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ಜರಗುಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಬಿಜೆಪಿಗೆ ಒಲಿದ ಹೊಸಪೇಟೆ ನಗರಸಭೆ ಗದ್ದುಗೆ ಗ್ಯಾರಂಟಿ ಕೈಕೊಡವಿ ಕಮಲ ಹಿಡಿದ ಪಕ್ಷೇತರರು

ರೂಪೇಶಕುಮಾರ (ಅಧ್ಯಕ್ಷ), ರಮೇಶಗುಪ್ತಾ (ಉಪಾಧ್ಯಕ್ಷ)ಆಯ್ಕೆ । ಬಿಜೆಪಿ ಕಾರ್ಯಕರ್ತರಿಂದ ಸಂಭ್ರಮಾಚರಣೆ

ಹಂಪಿ ಟೈಮ್ಸ್ ಹೊಸಪೇಟೆ

ಸ್ಥಳೀಯ ನಗರಸಭೆ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಗುರುವಾರ ಜುರುಗಿದ ಚುನಾವಣೆಯಲ್ಲಿ ಬಿಜೆಪಿ ಸದಸ್ಯರಾದ 5ನೇ ವಾರ್ಡಿನ ರೂಪೇಶಕುಮಾರ್ ಅಧ್ಯಕ್ಷರಾಗಿ, 29ನೇ ವಾರ್ಡಿನ ಸದಸ್ಯ ರಮೇಶ ಗುಪ್ತ ಉಪಾಧ್ಯಕ್ಷರಾಗಿ ಚುನಾಯಿತರಾಗಿ ಆಯ್ಕೆಯಾಗಿ ಗೆಲುವಿನ ನಗೆಬೀರಿದರು.

ನಗರಸಭೆಯ ಅಧಿಕಾರದ ಗದ್ದಗೆ ಏರಲು ರಾಜ್ಯದ ಆಡಳಿತ ಪಕ್ಷ ಕಾಂಗ್ರೆಸ್ ತಮ್ಮ ಪಕ್ಷದ ನಗರಸಭೆ ಸದಸ್ಯರಿಗೆ ವಿಪ್ ಜಾರಿಯೊಂದಿಗೆ, ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಸದಸ್ಯ ಅಸ್ಲಾಂ ಮಾಳಗಿ, ಉಪಾಧ್ಯಕ್ಷ ಸ್ಥಾನಕ್ಕೆ ಗುಜ್ಜಲ್ ರಾಘವೇಂದ್ರ ಅವರನ್ನು ಕಣಕ್ಕಿಳಿಸಿ, ಜೊತೆಗೆ ಸಂಸದ ಈ ತುಕಾರಾಂ ಮತ್ತು ಶಾಸಕ ಎಚ್. ಆರ್.ಗವಿಯಪ್ಪರನ್ನು ಅಂಕಣಕ್ಕಿಳಿಸಿ ಶತಪ್ರಯತ್ನ ನಡೆಸಿತಾದರೂ ಗೆಲುವು ಕೈವಶವಾಗಿಸಿಕೊಳ್ಳದೆ ಕೈಪಡೆ ಸೋಲನುಭವಿಸಿತು.

ನಗರಸಭೆಯ ಒಟ್ಟು 35 ಸದಸ್ಯರ ಪೈಕಿ ಮೂಲ ಬಿಜೆಪಿ ಸದಸ್ಯರ ಸಂಖ್ಯಾಬಲ 10 ಇದ್ದು, ಪಕ್ಷೇತರರು 9 ಸದಸ್ಯರಿದ್ದಾರೆ. ಪಕ್ಷೇತರ ಸದಸ್ಯರು ಗ್ಯಾರಂಟಿಗಳನ್ನು ಕೈಕೊಡವಿ, ಕಮಲವನ್ನು ಹಿಡಿದ ಪರಿಣಾಮ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದಿದೆ. ಬಿಜೆಪಿ ಸದಸ್ಯರಾದ ರೂಪೇಶಕುಮಾರ್ ಮತ್ತು ರಮೇಶ ಗುಪ್ತಾ ತಲಾ 19 ಮತಗಳನ್ನು ಪಡೆದು ಜಯಗಳಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಅಸ್ಲಾಂ ಮಾಳಗಿ ಮತ್ತು ಗುಜ್ಜಲ್ ರಾಘವೇಂದ್ರ ತಲಾ 17 ಮತಗಳನ್ನು ಪಡೆದು ಸೋಲುಂಡರು. ಕಾಂಗ್ರೆಸ್ಸಿನ ಪ್ರಬಲ ಆಕಾಂಕ್ಷಿ ಎಂದು ಹೇಳಾಗುತ್ತಿದ್ದ 20ನೇ ವಾರ್ಡಿನ ಕೆ.ಮಹೇಶ್ ಗೈರಾಗಿದ್ದರು.

ಚುನಾವಣಾಧಿಕಾರಿ ಸಹಾಯಕ ಆಯುಕ್ತ ವಿವೇಕಾನಂದ ಚುನಾಯಿತ ಅಭ್ಯರ್ಥಿಗಳ ಫಲಿತಾಂಶ ಘೋಷಿಸುತ್ತಿದ್ದಂತೆ ಪಟಾಕಿ ಸದ್ದು, ಕೇಕೆ, ಮೊಳಗಿದವು. ಕಾರ್ಯಕರ್ತರು ಚುನಾಯಿತ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಹೆಗಲಮೇಲೆ ಹೊತ್ತು ಕುಣಿದು, ಸಿಹಿ ಹಂಚಿ ಸಂಭ್ರಮಿಸಿದರು. ನಗರಸಭೆ ಸದಸ್ಯರಾದ ಎಲ್.ಎಸ್.ಆನಂದ, ಕಿರಣ್, ಜೀವರತ್ನ, ತಾರಳ್ಳಿ ಜಂಬುನಾಥ ಸೇರಿದಂತೆ ಇತರರಿದ್ದರು.

ನಗರದ ಅಭಿವೃದ್ಧಿ ನಿರೀಕ್ಷೆ

ನಗರಸಭೆ 35 ವಾರ್ಡ್‌ಗಳನ್ನು ಒಳಗೊಂಡಿದ್ದು, ನಗರದ ಸೌಂದರ್ಯ ಮತ್ತು ಜನರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ನೂತನ ಅಧ್ಯಕ್ಷ, ಉಪಾಧ್ಯಕ್ಷರು ಯೋಜನಾಬದ್ಧವಾಗಿ ಕಾರ್ಯನಿರ್ವಹಿ ಸಬೇಕಿದೆ. ಕಳೆದೊಂದು ವರ್ಷದಲ್ಲಿ ನಿರೀಕ್ಷಿತ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ ಎಂಬುದನ್ನು ಈ ಹಿಂದೆ ನಗರಸಭೆ ಸದಸ್ಯರೇ ಬೀದಿಗಿಳಿದು ಹೋರಾಟ ನಡೆಸಿದ್ದರು. ಅಭಿವೃದ್ಧಿ ಕಾರ್ಯಗಳಿಗೆ ಶಾಸಕರು ಸಾಥ್ ನೀಡುತ್ತಿಲ್ಲವೆಂದು ಬಿಜೆಪಿ ಸದಸ್ಯರು ಸೇರಿದಂತೆ ಕಾಂಗ್ರೆಸ್ ಸದಸ್ಯರು ಆರೋಪಿಸಿದ್ದರು. ಈಗ ಚುನಾವಣೆಯಲ್ಲಿ ಸಂಸದ ಈ.ತುಕಾರಾಂ ಮತ್ತು ಶಾಸಕ ಎಚ್.ಆರ್.ಗವಿಯಪ್ಪ ನೇರವಾಗಿ ಚುನಾವಣಾ ಅಂಗಳಕ್ಕಿಳಿದು ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಅಲ್ಲದೆ ಈ ಹಿಂದೆ ಶಾಸಕ ಎಚ್.ಆರ್.ಗವಿಯಪ್ಪನವರ ನಗರಸಭೆ ವಿಷಯ ಪ್ರಸ್ತಾಪವಾದಗಲೆಲ್ಲ ನಗರಸಭೆ ಆಡಳಿತದಲ್ಲಿ ನಾನು ಮೂಗುತೂರಿಸುವುದಿಲ್ಲ. ನಗರಸಭೆ ಆಡಳಿತಕ್ಕೆ ಸ್ವತಂತ್ರ್ಯವಿದೆ ಎಂದೇಳುತ್ತಿದ್ದರು. ಶಾಸಕರ ಸಹಕಾರವಿಲ್ಲದೆ ನಗರದ ಸರ್ವತೋಮುಖ ಅಭಿವೃದ್ಧಿ ಅಸಾಧ್ಯ. ನಗರಸಭೆ ವ್ಯಾಪ್ತಿಯ ಸುಮಾರು ಲಕ್ಷಾಂತರ ಜನರು ನಗರಸಭೆ ಸದಸ್ಯರನ್ನು ಆಯ್ಕೆ ಮಾಡಿದಂತೆ, ಶಾಸಕರಿಗೂ ಮತ ಹಾಕಿ ಆಯ್ಕೆ ಮಾಡಿದ್ದಾರೆ ಎಂಬುದನ್ನು ಶಾಸಕರು ಮರೆಯಬಾರದು. ಚುನಾವಣೆಯ ಕ್ಷಣದಲ್ಲಿ ಮಾತ್ರ ರಾಜಕೀಯ ನಂತರ ನಗರವನ್ನು ಸರ್ವತೋಮುಖ ಅಭಿವೃದ್ಧಿಗೊಳಿಸುವಲ್ಲಿ ನಗರಸಭೆ ಸದಸ್ಯರು, ಶಾಸಕರು ಒಗ್ಗೂಡಿ ಕಾರ್ಯನಿರ್ವಹಿಸಬೇಕೆಂಬುದು ಜನರ ಒತ್ತಾಸೆಯಾಗಿದೆ.

ಮಾನವ ಸರಪಳಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಲಿ

ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಮಾನವ ಸರಪಳಿ ಕಾರ್ಯಕ್ರಮವು ಸೆ.15ರಂದು ಅಚ್ಚುಕಟ್ಟಾಗಿ ನಡೆಯಬೇಕು. ಯಾವುದೇ ಲೋಪಕ್ಕೆ ಅವಕಾಶವಾಗದಂತೆ ಅಧಿಕಾರಿಗಳು ಜಾಗೃತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸೆಪ್ಟೆಂಬರ್ 12ರಂದು ನಡೆದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸೆಪ್ಟೆಂಬರ್ 15ರಂದು ಅಂದು ವಿಜಯನಗರ ಜಿಲ್ಲೆಯಲ್ಲಿ ಸುಮಾರು 38 ಕಿಲೋ ಮೀಟರ್‌ವರೆಗೆ ಮಾನವ ಸರಪಳಿ ನಿರ್ಮಿಸಲಾಗುತ್ತದೆ. ಟಿ.ಬಿ. ಡ್ಯಾಮ್ ಮೊದಲನೇ ಸೇತುವೆಯಿಂದ ಗಣೇಶ ದೇವಸ್ಥಾನದವರೆಗೆ 1 ಕಿ.ಮೀ., ಗಣೇಶ ದೇವಸ್ಥಾನದಿಂದ ಸಾಯಿಬಾಬಾ ಸರ್ಕಲ್‌ದವರೆಗೆ 3 ಕಿ.ಮೀ, ಸಾಯಿಬಾಬಾ ಸರ್ಕಲ್‌ನಿಂದ ಬಸವೇಶ್ವರ >>4

ಸ್ವಚ್ಛ, ಸುಂದರ ನಗರ ನಿರ್ಮಾಣಕ್ಕೆ ಆದ್ಯತೆ

ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆ ನಗರವನ್ನು ರಾಜ್ಯದ ಸ್ವಚ್ಛ ಹಾಗೂ ಸುಂದರ ನಗರವನ್ನಾಗಿಸಲು ಶಕ್ತಿ ಮೀರಿ ಪ್ರಯತ್ನಿಸುವುದಾಗಿ ನಗರಸಭೆ ನೂತನ ಅಧ್ಯಕ್ಷ ಎನ್.ರೂಪೇಶ ಕುಮಾರ್ ಹೇಳಿದರು.

ನಗರಸಭೆಯ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ನಗರದಂತೆ ಇನ್ನುಂದೆ ಹೊಸಪೇಟೆ ಸ್ವಚ್ಛ ನಗರವೆಂಬ ಖ್ಯಾತಿ ಪಡೆಯಲಿದೆ. ಬೀದಿ ನಾಯಿಗಳನ್ನು ಕಾರಿಗನೂರು ಸಮೀಪದ ಡಂಪಿಂಗ್ ಯಾರ್ಡ್‌ಗೆ ಸ್ಥಳಾಂತರಿಸಲಾಗುತ್ತದೆ. ಯುಜಿಡಿ ನಗರದ ಎಲ್ಲ ವಾರ್ಡ್‌ಗೆ ಸಮರ್ಪಕ ಕುಡಿಯುವ ನೀರು ಒದಗಿಸಲು ಒತ್ತು ನೀಡಲಾಗುವುದು ಎಂದು ಭರವಸೆ ನೀಡಿದರು.

ಉಪಾಧ್ಯಕ್ಷ ರಮೇಶ ಗುಪ್ತಾ ಮಾತನಾಡಿ, ಇನ್ನುಮುಂದೆ ಹೊಸಪೇಟೆ ಸಮಗ್ರ ಚಿತ್ರಣ ಬದಲಾವಣೆಗೆ ಶ್ರಮಿಸಲಾಗುವುದು. ಈ ನಿಟ್ಟಿನಲ್ಲಿ ನಗರಸಭೆ ಅಧಿಕಾರಿಗಳನ್ನು ಚುರುಕುಗೊಳಿಸಲಾಗುವುದು ಎಂದು ಹೇಳಿದರು. ಸದಸ್ಯರು ಇದ್ದರು.

ಆಸಕ್ತಿಯಿಂದ ಕಲಿತಾಗ ಗಣಿತ ಸರಳ

ನಾಗೇನಹಳ್ಳಿ ಗ್ರಾಪಂ ಅಧ್ಯಕ್ಷ ಎಂ.ದುರುಗಪ್ಪ ಹೇಳಿಕೆ । ವಿದ್ಯಾರ್ಥಿಗಳಲ್ಲಿ ಸ್ಪರ್ಧಾಮನೋಭಾವ ಹೆಚ್ಚಳಕ್ಕೆ ಸ್ಪರ್ಧೆ ಸಹಕಾರಿ

ಒಂದೇ ದಿನದಲ್ಲಿ ಪರೀಕ್ಷೆ, ಫಲಿತಾಶ, ಬಹುಮಾನ ನೀಡಿದ ಗ್ರಾಮ ಪಂಚಾಯತಿ । ಮಕ್ಕಳಿಗೆ ಪ್ರಮಾಣ ಪತ್ರ ಚೆಕ್ ವಿತರಣೆ

ಹಂಪಿ ಟೈಮ್ಸ್ ಹೊಸಪೇಟೆ

ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದೊಂದಿಗೆ ಗಣಿತ ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಾಗ ಗಣಿತ ಕಲಿಕೆ ಅತ್ಯಂತ ಸರಳ ಎನಿಸಲಿದೆ. ಜೀವನಕ್ಕೆ ಗಣಿತ ಅತ್ಯಂತ ಅವಶ್ಯವಿರುವುದರಿಂದ ಮಕ್ಕಳು ಕಲಿಯುವ ಆಸಕ್ತಿ ಹೆಚ್ಚಿಸಿಕೊಳ್ಳಬೇಕು ಎಂದು ನಾಗೇನಹಳ್ಳಿ ಗ್ರಾಪಂ ಅಧ್ಯಕ್ಷ ಎಂ.ದುರುಗಪ್ಪ ಹೇಳಿದರು.

ತಾಲೂಕಿನ ನಾಗೇನಹಳ್ಳಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮುದಾಯ, ಅಕ್ಷರ ಫೌಂಡೇಶನ್ ಸಂಯುಕ್ತಾಶಯದಲ್ಲಿ ಸ.ಹಿ.ಪ್ರಾ.ಶಾಲೆಯಲ್ಲಿ ಗ್ರಾಮಪಂಚಾಯಿತಿಯಿಂದ ಹಮ್ಮಿ ಕೊಂಡಿದ್ದ ಗ್ರಾಮ ಪಂಚಾಯಿತಿ ಮಟ್ಟದ ಸರ್ಕಾರಿ ಶಾಲಾ ಮಕ್ಕಳ ಗಣಿತ ಸ್ಪರ್ಧೆ ಕಾರ್ಯಕ್ರಮದಲ್ಲಿ ಗುರುವಾರ ಮಾತನಾಡಿದರು. ಗ್ರಾಮೀಣ ಮಕ್ಕಳಲ್ಲಿ ಕಲಿಕಾಸಕ್ತಿ ಹೆಚ್ಚಿಸಲು ಗಣಿತ ಸ್ಪರ್ಧೆ ಸಹಕಾರಿಯಾಗಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿದ್ದಾರೆ ಎಂಬುದಕ್ಕೆ ಗಣಿತ ಸ್ಪರ್ಧೆ ಸಾಕ್ಷಿಯಾಗಿದೆ. ನಾಗೇನಹಳ್ಳಿ, ಬೆನಕಾಪುರ, ಕಾಳಘಟ್ಟ, ಬಸವನದುರ್ಗ ಗ್ರಾಮಗಳಲ್ಲಿ ಓದುತ್ತಿರುವ 4, 5 ಮತ್ತು 6ನೇ ತರಗತಿಯ ಒಟ್ಟು 279 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಪ್ರತಿ ತರಗತಿಯಿಂದ ಅತ್ಯಂತ ಹೆಚ್ಚು ಅಂಕ ಗಳಿಸಿದ ತಲಾ ಮೂವರು ವಿದ್ಯಾರ್ಥಿಗಳನ್ನ ಆಯ್ಕೆ ಮಾಡಿ, ಪ್ರಥಮ(ರೂ 1000), ದ್ವಿತೀಯ(ರೂ 600) ಹಾಗೂ ತೃತೀಯ(ರೂ 400) ಪ್ರೋತ್ಸಾಹಕ ಬಹುಮಾನದೊಂದಿಗೆ ಪ್ರಮಾಣ ಪತ್ರ ವಿತರಿಸಲಾಗಿದೆ ಎಂದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಮೀಮ್ ಬಾನು ಮಾತನಾಡಿ, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸರ್ಕಾರದ ಯೋಜನೆ ಸಹಕಾರಿಯಾಗಿದೆ. ಮಕ್ಕಳು ಸರ್ಕಾರದ ಯೋಜನೆಗಳ ಪ್ರಯೋಜನ ಪಡೆದುಕೊಂಡು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಗ್ರಾಮ ಪಂಚಾಯಿತಿ ಬೆಳಿಗ್ಗೆ ಪರೀಕ್ಷೆ ನಡೆಸಿ, ಅಂದೇ ಪತ್ರಿಕೆಗಳನ್ನು ಪರಿಶೀಲಿಸಿ ಅಂಕ ನೀಡಿ, ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಅಂದು ಸಂಜೆಯೊಳಗೆ ಪ್ರಶಸ್ತಿ ಪತ್ರಗಳೊಂದಿಗೆ ನಗದನ್ನು ಚೆಕ್ ಮೂಲಕ ಮಕ್ಕಳಿಗೆ ವಿತರಿಸಿದರು. ಗ್ರಾಪಂ ಸದಸ್ಯರು, ಶಾಲಾ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಇದ್ದರು.

ಪ್ರಥಮ ಬಹುಮಾನ: ಹುಸೇನ್ ನಾಗೇನಹಳ್ಳಿ (6ನೇ ತರಗತಿ), ಎಂ.ರವಿನಾಯ್ಕ ಕಾಳಘಟ್ಟ (5ನೇ ತರಗತಿ), ಎಚ್. ಭರತ ಕಾಳಘಟ್ಟ (4ನೇ ತರಗತಿ),
ದ್ವಿತೀಯ ಬಹುಮಾನ: ಸಮರ್ಥ ನಾಗೇನಹಳ್ಳಿ (6ನೇ ತರಗತಿ) ಯುನೀಸ್ ನಾಗೇನಹಳ್ಳಿ (5ನೇ ತರಗತಿ), ಸುಮನ್ ನಾಗೇನಹಳ್ಳಿ (4ನೇ ತರಗತಿ),
ತೃತೀಯ ಬಹುಮಾನ: ಶ್ರೀನಿಧಿ ಎನ್. (6ನೇ ತರಗತಿ), ಸಫಿಯಾ ನಾಗೇನಹಳ್ಳಿ (5ನೇ ತರಗತಿ), ಎಚ್.ಆದಿತ್ಯ ಕಾಳಘಟ್ಟ (4ನೇ ತರಗತಿ),

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಚಿಂತಿಸುತ್ತಿದ್ದೀರಾ ?
ಚಿಕ್ಕ ಮೊತ್ತ ದೊಡ್ಡ ಜಾಹೀರಾತು
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ ದಿನಪತ್ರಿಕೆ
85 Thousand + epaper Readers Google Analytics
ನಂ. 1 ಸ್ಥಳೀಯ ದಿನಪತ್ರಿಕೆ
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಜಾಹೀರಾತುಗಳ ವಿವಿಧ ಪ್ಯಾಕೇಜ್ ಮತ್ತು ಡಿಸ್ಕೌಂಟ್‌ಗಳಿಗಾಗಿ ಸಂಪರ್ಕಿಸಿ
Visit Us www.hampitimes.com / epaper.hampitimes.com
M: 94486 33038 / 94825 99089